# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಡಿ/2318/2021/ಪಿ.ಎ.ಆರ್.ಇ-5
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ ವೀದಿ,
ಬೆಂಗಳೂರು, ದಿನಾಂಕ :27/12/2021

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ: ಶ್ರೀ. ಕೆ.ಎನ್. ತಿರುಮಲಯ್ಯ ಬಿನ್ ಲೇಟ್ ನರಸಯ್ಯ, ಗ್ರಾಮಲೆಕ್ಕಾಧಿಕಾರಿ, ಕ್ಯಾತನಕೇರಿ ಸರ್ಕಲ್, ನಾಗಲಮಡಿಕೆ ಹೋಬಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ,ಇವರು ಸರ್ಕಾರಿ ನೌಕರರಾಗಿ ಕೆಲಸ ನಿರ್ವಹಿಸುವ ಕಾಲಕ್ಕೆ ದುರ್ನಡತೆ ಎಸಗಿರುವ ಕುರಿತಂತೆ ಶಿಸ್ತು ನಡವಳಿ ಜರುಗಿಸುವ ಬಗ್ಗೆ.**

*****

1. ಆರಕ್ಷಕ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ತುಮಕೂರು, ( ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ, ಎದುರುದಾರರಾದ **ಶ್ರೀ. ಕೆ.ಎನ್. ತಿರುಮಲಯ್ಯ ಬಿನ್ ಲೇಟ್ ನರಸಯ್ಯ, ಗ್ರಾಮಲೆಕ್ಕಾಧಿಕಾರಿ, ಕ್ಯಾತನಕೇರಿ ಸರ್ಕಲ್, ನಾಗಲಮಡಿಕೆ ಹೋಬಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ**, ಇವರ ವಿರುದ್ಧ **ಶ್ರೀ. ಟಿ.ಎನ್.ಸಂಜೀವರಾಯ್ ಬಿನ್ ನಾಗಪ್ಪ, ತಿಮ್ಮಮ್ಮನಹಳ್ಳಿ, ಪಾವಗಡ ತಾಲ್ಲೂಕು** ( ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ.) ದೂರು ಸಲ್ಲಿಸಿದ್ದು, ಸದರಿ ದೂರಿನಲ್ಲಿ, ದೂರುದಾರರಿಗೆ ಸೇರಿದ ತಿಮ್ಮಮ್ಮನಹಳ್ಳಿ ಗ್ರಾಮದ ಸರ್ವೆ ನಂ.57/2 ಇದರ ಪಹಣಿ ಪತ್ರಿಕೆಯ 12ನೇ ಕಾಲಂನಲ್ಲಿ ತಪ್ಪಾಗಿ ಆಂಜನಪ್ಪ ಇವರ ಹೆಸರು ನಮೂದಾಗಿದ್ದು, ತಪ್ಪಾಗಿದ್ದರ ದುರ್ಲಾಭ ಪಡೆದುಕೊಂಡು ಆಂಜನಪ್ಪನ ಮಕ್ಕಳು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವ ವಿಚಾರ ದೂರುದಾರರಿಗೆ ತಿಳಿದು, ಅದಕ್ಕೆ ತಕರಾರು ಸಲ್ಲಿಸಿದ್ದು, ಸದರಿ ಕಡತವನ್ನು ತಹಶೀಲ್ದಾರ್‌ರವರು ಎದುರುದಾರರಿಗೆ ರಿಪೋರ್ಟ್ ಹಾಕಲು ಕಳುಹಿಸಿದ್ದು, ದೂರುದಾರರ ಪರವಾಗಿ ರಿಪೋರ್ಟ್ ಹಾಕಲು 10,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿರುತ್ತಾರೆಂದು ಸಲ್ಲಿಸಿದ ವರದಿ ಮೇರೆಗೆ ಗೌರವಾನ್ವಿತ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 7(2)ರನ್ವಯ ಸ್ವಯಂ ಪ್ರೇರಿತವಾಗಿ ದೂರನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:**

i. ದೂರುದಾರರಾದ **ಶ್ರೀ. ಟಿ.ಎನ್.ಸಂಜೀವರಾಯ್ ಬಿನ್ ನಾಗಪ್ಪ, ತಿಮ್ಮಮ್ಮನಹಳ್ಳಿ, ಪಾವಗಡ ತಾಲ್ಲೂಕು** ಇವರು ದೂರಿನಲ್ಲಿ ಬರೆದುಕೊಂಡ ಅಂಶವೇನೆಂದರೆ ದೂರುದಾರರಿಗೆ ತಿಮ್ಮಮ್ಮನಹಳ್ಳಿ ಗ್ರಾಮದ ಸರ್ವೆ ನಂ.57/2 ಇದರ ಪಹಣಿ ಪತ್ರಿಕೆಯ 12ನೇ ಕಾಲಂನಲ್ಲಿ ತಪ್ಪಾಗಿ ಆಂಜನಪ್ಪ ಇವರ ಹೆಸರು ನಮೂದಾಗಿದ್ದು, ತಪ್ಪಾಗಿದ್ದರ ದುರ್ಲಾಭ ಪಡೆದುಕೊಂಡು ಆಂಜನಪ್ಪನವರ ಮಕ್ಕಳು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಳ್ಳುವ ವಿಚಾರ ತಿಳಿದು, ದೂರುದಾರರು ತಕರಾರು ಸಲ್ಲಿಸಿದ್ದು, ಸದರಿ ಕಡತವನ್ನು ತಹಶೀಲ್ದಾರ್‌ರವರು ಎದುರುದಾರರಿಗೆ ರಿಪೋರ್ಟ್ ಹಾಕುವ ಸಲುವಾಗಿ ಕಳುಹಿಸಿದ್ದು, ದೂರುದಾರರನ್ನು ಎದುರುದಾರರು ಕಚೇರಿಗೆ ಕರೆಯಿಸಿ, ದೂರುದಾರರ ಪರವಾಗಿ ರಿಪೋರ್ಟ್ ಹಾಕಲು 10,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಅಲ್ಲದೆ ಆಗಾಗ ದೂರುದಾರರಿಗೆ ಫೋನ್ ಮಾಡಿ ಲಂಚಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಈ ದೂರು ಸಲ್ಲಿಸುವುದಕ್ಕಿಂತ ಒಂದು ವಾರದ ಹಿಂದೆ ಎದುರುದಾರರು ದೂರುದಾರರಿಗೆ ಫೋನ್ ಮಾಡಿ 5,000/- ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

ii) ದೂರುದಾರರಿಗೆ ಲಂಚ ನೀಡಲು ಮನಸ್ಸಿಲ್ಲವಾದ್ದರಿಂದ ದಿ: 30/01/2019 ರಂದು ತುಮಕೂರು ಎಸಿಬಿ ಪೋಲಿಸ್ ಠಾಣೆಗೆ ಹೋಗಿ ದೂರು ಸಲ್ಲಿಸಿದ್ದು, ಸದರಿ ದೂರು ಠಾಣಾ ಗುನ್ನಾ ನಂ.03/2019 ರಲ್ಲಿ ಕಲಂ 7(A) ಭ್ರಷ್ಟಾಚಾರ ನಿಗ್ರಹ ಕಾಯ್ದೆಯಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ. ಪ್ರಕರಣವು ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಗಂಗಾಧರ್ ತಿಲಕ್ (ನೆರಳುಸಾಕ್ಷಿ) 2) ಶೈಲಜ ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರುಗಳ ಸಮಕ್ಷಮ ದೂರುದಾರರು ಹಾಜರುಪಡಿಸಿದ ಮೆಮೋರಿ ಕಾರ್ಡ್‌ನಲ್ಲಿದ್ದ ಸಂಭಾಷಣೆಯನ್ನು ಡಿ.ವಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ ಮತ್ತು ಸದರಿ ಸಂಭಾಷಣೆಯನ್ನು ಲಿಪಿಕರಿಸಿಕೊಂಡು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆಯಿಟ್ಟಿರುವುದು ಕಂಡು ಬರುತ್ತದೆ. ದೂರುದಾರರು ಹಾಜರುಪಡಿಸಿದ ಮೆಮೋರಿ ಕಾರ್ಡನ್ನು ತನಿಖಾಧಿಕಾರಿಯವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ಲಂಚ ನೀಡಲು ತಂದ ರೂ. 5,000/- (500X10) ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದು, ಸದರಿ ನೋಟುಗಳ ನಂಬರುಗಳನ್ನು ಪಂಚರು ಬಿಳಿ ಹಾಳೆಯಲ್ಲಿ ಬರೆದುಕೊಂಡಿದ್ದು, ಪೋಲೀಸ್ ಸಿಬ್ಬಂದಿ ನೋಟುಗಳ ಎರಡೂ ಬದಿಗೆ ಫಿನಾಪ್ತಲಿನ್ ಪೌಡರನ್ನು ಸವರಿ ಸದರಿ ಹಣವನ್ನು ಪಂಚಸಾಕ್ಷಿ-2 ಶೈಲಜರವರ

ಮೂಲಕ ದೂರುದಾರರ ಶರ್ಟ್ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ಶೈಲಜರವರ ಎರಡೂ ಕೈಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಪ್ತಲಿನ್ ಪೌಡರಿನ ಗುಣಧರ್ಮವನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳುಸಾಕ್ಷಿಯಾದ ಗಂಗಾಧರ್ ತಿಲಕ್ ಇವರಿಗೆ ದೂರುದಾರರೊಂದಿಗೆ ಹೋಗಿ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಮಾನಗಳನ್ನು ಗಮನಿಸಬೇಕು ಎಂದು ಸೂಚನೆ ನೀಡಿರುತ್ತಾರೆ. ಎದುರುದಾರರನ್ನು ಭೇಟಿಯಾದಾಗ ಕೆಲಸದ ಬಗ್ಗೆ ವಿಚಾರಿಸಬೇಕು ಮತ್ತು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಹಣ ಪಡೆದುಕೊಂಡ ನಂತರ ಕೈಯಿಂದ ಮುಖ ಒರೆಸಿಕೊಳ್ಳುವ ಮೂಲಕ ಸಂಜ್ಞೆ ನೀಡಬೇಕೆಂದು ತಿಳಿಸಿರುತ್ತಾರೆ. ಲಂಚ ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ವಾಯ್ಸ್ ರೆಕಾರ್ಡರನ್ನು ನೀಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ದಿ: 30-01-2019 ರಂದು ಸಮಯ ಮಧ್ಯಾಹ್ನ 12.45 ರಿಂದ 2.00 ಘಂಟೆಯವರೆಗೆ ತುಮಕೂರು ಎಸಿಬಿ ಕಛೇರಿಯಲ್ಲಿ ಬರೆದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

iii) ಪ್ರಾಯೋಗಿಕ ಪಂಚನಾಮೆ ಮುಗಿದ ನಂತರ ದಾಳಿ ತಂಡದವರು, ತುಮಕೂರನ್ನು ಬಿಟ್ಟು ಸಾಯಂಕಾಲ 4.00 ಘಂಟೆಗೆ ಪಾವಗಡವನ್ನು ತಲುಪಿ, ವಾಹನವನ್ನು ತಹಶೀಲ್ದಾರ್ ಕಚೇರಿಯಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ, ದೂರುದಾರರು ಹಾಗೂ ನೆರಳುಸಾಕ್ಷಿ ಗಂಗಾಧರ್ ತಿಲಕ್ ಇವರನ್ನು ತಹಶೀಲ್ದಾರ್ ಕಚೇರಿಯ ಒಳಗೆ ಕಳುಹಿಸಿ, ದಾಳಿ ತಂಡದವರು ಗೌಪ್ಯವಾಗಿ ಅಲ್ಲಲ್ಲಿ ಸ್ವಲ್ಪ ದೂರದಲ್ಲಿ ಸಂಶಯಬರದಂತೆ ನಿಂತಿರುತ್ತಾರೆ. ದೂರುದಾರರು ಅವರ ಸ್ನೇಹಿತ ನಾಗಪ್ಪ ಇವರಿಗೆ ಫೋನ್ ಮಾಡಲಾಗಿ, ಎದುರುದಾರರು ತಹಶೀಲ್ದಾರ್ ಕಚೇರಿಯ ಭೂಮಿಕೇಂದ್ರದಲ್ಲಿ ಇರುವುದಾಗಿ ತಿಳಿಸಿದ್ದು, ಅದರಂತೆ ಭೂಮಿಕೇಂದ್ರಕ್ಕೆ ಹೋಗಲಾಗಿ ಅಲ್ಲಿ ಎದುರುದಾರರು ಹಾಜರಿದ್ದು, ಹಣವನ್ನು ದೂರುದಾರರಿಂದ ಕೇಳಿ ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿ, ತಮ್ಮ ಶರ್ಟ್‌ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಹಣ ಪಡೆದುಕೊಂಡ ನಂತರ, ಸುಮಾರು ಸಾಯಂಕಾಲ 4.20 ಘಂಟೆಗೆ ದೂರುದಾರರ ಸೂಚನೆಯ ಮೇರೆಗೆ ತಕ್ಷಣ ದಾಳಿತಂಡದವರು ಎದುರುದಾರರು ಇರುವ ಭೂಮಿಕೇಂದ್ರಕ್ಕೆ ಬಂದು, ತಮ್ಮ ಪರಿಚಯ ಮಾಡಿಕೊಂಡು ಎದುರುದಾರರ ಮೇಲೆ ಪ್ರಕರಣ ದಾಖಲಾದ ಬಗ್ಗೆ ತಿಳಿಸಿ ತನಿಖೆಗೆ ಸಹಕರಿಸುವಂತೆ ಸೂಚಿಸಿರುತ್ತಾರೆ. ಎದುರುದಾರರ ಎರಡೂ ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಹಣದ ಬಗ್ಗೆ

ವಿಚಾರಿಸಲಾಗಿ, ಲಂಚದ ಹಣವನ್ನು ಶರ್ಟ್ ಜೇಬಿನಿಂದ ತೆಗೆದು ಎದುರುದಾರರು ಹಾಜರುಪಡಿಸಿದ್ದು, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚರು ಸದರಿ ನೋಟುಗಳ ನಂಬರ್‌ಗಳನ್ನು ಈಗಾಗಲೇ ದಾಖಲಿಸಿಕೊಂಡ ನಂಬರ್‌ನೊಂದಿಗೆ ತಾಳೆಮಾಡಿ ನೋಡಲಾಗಿ, ನೋಟುಗಳ ನಂಬರುಗಳು ತಾಳೆಯಾದ ಮೇರೆಗೆ ತನಿಖಾಧಿಕಾರಿಗಳು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಶರ್ಟ್‌ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಯಲಾಗಿ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಸದರಿ ಶರ್ಟನ್ನು ಕೂಡ ಅಮಾನತ್ತು ಪಡಿಸಿಕೊಂಡಿರುತ್ತಾರೆ. ದೂರುದಾರರು ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯನ್ನು ತಮಗೆ ನೀಡಿದ ವಾಯ್ಸ್ ರೆಕಾರ್ಡರ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು ಅದನ್ನು ಡಿ.ವಿ.ಡಿ.ಗೆ ವರ್ಗಾಯಿಸಿಕೊಂಡಿರುತ್ತಾರೆ. ಲಂಚಕ್ಕೆ ಬೇಡಿಕೆ ಇಟ್ಟ ಸಂಭಾಷಣೆ ಹಾಗೂ ಲಂಚ ನೀಡುವ ಕಾಲಕ್ಕೆ ನಡೆದ ಸಂಭಾಷಣೆಯ ಪ್ರತಿಲೇಖವನ್ನು ತಯಾರಿಸಿ, ಅದನ್ನು ಮೂರು ಬಾರಿ ಓದಿಸುವ ಮೂಲಕ ಎದುರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಅದೇ ಪ್ರಕಾರ ದೂರುದಾರರ ಮಾದರಿ ಧ್ವನಿಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ಎದುರುದಾರರ ಸ್ವರಕ್ಷಣಾ ಹೇಳಿಕೆಯನ್ನು ಪಡೆದುಕೊಂಡಿದ್ದು, ಅದರಲ್ಲಿ ದೂರುದಾರರು ಹಣ ಕೊಡಲು ಬಂದರು, ಅದನ್ನು ನಾನು ನಿರಾಕರಿಸಿದೆ, ಅವರೇ ನನ್ನ ಜೇಬಿಗೆ ಹಣವನ್ನು ಹಾಕಿದರು, ಆ ತಕ್ಷಣವೆ ತಾವು ಬಂದು ನನ್ನನ್ನು ವಿಚಾರಣೆಗೆ ಒಳಪಡಿಸಿರುತ್ತೀರಿ, ನನ್ನನ್ನು ಕ್ಷಮಿಸಿ ಎಂದು ಬರೆದುಕೊಟ್ಟಿರುತ್ತಾರೆ. ಈ ಬಗ್ಗೆ ದೂರುದಾರರನ್ನು ವಿಚಾರಿಸಲಾಗಿ ಎದುರುದಾರರು ಬರೆದುಕೊಟ್ಟ ರಕ್ಷಣಾ ಹೇಳಿಕೆ ಸತ್ಯಕ್ಕೆ ದೂರವಾಗಿರುತ್ತದೆ ಎಂದು ನುಡಿದಿರುತ್ತಾರೆ. ನೆರಳುಸಾಕ್ಷಿಯನ್ನು ವಿಚಾರಿಸಲಾಗಿ ಸದರಿಯವರು ಕೂಡ ದೂರುದಾರ ಹೇಳಿಕೆಗೆ ಅನುಗುಣವಾಗಿ ನುಡಿದಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದ ಕಡತದ ಬಗ್ಗೆ ಎದುರುದಾರರನ್ನು ವಿಚಾರಿಸಲಾಗಿ ಭೂಮಿಕೇಂದ್ರದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಪಾವಗಡ ತಹಶೀಲ್ದಾರ್ ಆದ ಎಂ. ಹನುಮಂತಯ್ಯ ಇವರು ಹಾಜರಿದ್ದು, ಕಡತವನ್ನು ಭೂಮಿಕೇಂದ್ರದಿಂದ ತರಿಸಿ, ಪ್ರತಿಗಳಿಗೆ ದೃಢೀಕರಿಸಿದ ಮೇರೆಗೆ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಾಗಲಮಡಿಕೆ ಉಪ ತಹಶೀಲ್ದಾರ್ ಆದ ಶ್ರೀ. ರೆಡ್ಡಿ ಶಿವಾನಂದ್‌ರವರಿಗೆ ಎದುರುದಾರರ ಸಂಭಾಷಣೆಯನ್ನು ಕೇಳಿಸಿದ್ದು, ಸದರಿಯವರು ಅದರಲ್ಲಿದ್ದ ಒಂದು ಧ್ವನಿಯು ಎದುರುದಾರರದೆಂದು ಗುರುತಿಸಿರುತ್ತಾರೆ. ಅಭಿಯಂತರರು ಹಾಜರಿದ್ದು, ನೆರಳುಸಾಕ್ಷಿ ತೋರಿಸಿದಂತೆ, ಘಟನಾ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತಾರೆ. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು

ದಿ: 30/01/2019 ರಂದು ಸಾಯಂಕಾಲ 4.20 ರಿಂದ ರಾತ್ರಿ 7 ಗಂಟೆಯವರೆಗೆ ಪಾವಗಡ ತಹಶೀಲ್ದಾರ್‌ರವರ ಕಚೇರಿಯ ಒಂದನೇ ಮಹಡಿಯ ಭೂಮಿಕೇಂದ್ರದಲ್ಲಿ ಬರೆದ ಟ್ರ್ಯಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

iv) ತನಿಖಾ ಕಾಲದಲ್ಲಿ ಎದುರುದಾರರ ಎರಡೂ ಕೈಗಳನ್ನು ತೊಳೆದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಹಾಗೂ ಶರ್ಟ್ ಜೇಬಿನ ಒಳಭಾಗವನ್ನು ತೊಳೆದ ದ್ರಾವಣದಲ್ಲಿ ಫಿನಾಪ್ತಲಿನ್ ಅಂಶ ಪತ್ತೆ ಆಗಿರುವುದು ರಾಸಾಯನಿಕ ಪರೀಕ್ಷಾ ವರದಿಯಿಂದ ಕಂಡುಬರುತ್ತದೆ. ಲಂಚಕ್ಕಾಗಿ ಬೇಡಿಕೆ ಇಟ್ಟ ಸಂಭಾಷಣೆಯಲ್ಲಿಯ ಧ್ವನಿಯು ಎದುರುದಾರರದೆಂದು ಶ್ರೀ. ರಡ್ಡಿ ಶಿವಾನಂದ್, ಉಪ ತಹಶೀಲ್ದಾರ್, ನಾಗಲಮಡಿಕೆ ಗುರುತಿಸಿದ್ದಾರೆ.

v) ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಎದುರುದಾರರನ್ನು ಸೇವೆಯಿಂದ ವಜಾ ಮಾಡಲು ಅಧಿಕಾರಹೊಂದಿದ ಪ್ರಾಧಿಕಾರದಿಂದ ಸದರಿಯವರನ್ನು ಅಭಿಯೋಜನೆಗೊಳಿಸಲು ಮಂಜೂರಾತಿ ಆದೇಶ ಪಡೆದುಕೊಂಡಿರುತ್ತಾರೆ.

3) ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ದಿ: 20/09/2021 ರಂದು ಜಾರಿ ಮಾಡಿದ್ದು, ಸದರಿಯವರು ಸಲ್ಲಿಸಿದ ಸಮಜಾಯಿಷಿಯು ಈ ಕಚೇರಿಗೆ ದಿ: 01/10/2021 ರಂದು ತಲುಪಿದ್ದು, ಸದರಿಯವರು ತಮ್ಮ ಸಮಜಾಷಿಯಲ್ಲಿ ಬರೆದುಕೊಂಡ ಅಂಶವೇನೆಂದರೆ, ತಾನು ಪರಿವೀಕ್ಷಣಾ ಟಿಪ್ಪಣಿಯಲ್ಲಿ ತಿಳಿಸಿದಂತೆ, ಸಂಜೀವರಾಯ್ ಇವರಿಂದ ಲಂಚವನ್ನು ಪಡೆದುಕೊಂಡಿರುವುದಿಲ್ಲ ಮತ್ತು ಸರ್ಕಾರಿ ಕೆಲಸದಲ್ಲಿ ಲೋಪ ಎಸಗಿರುವುದಿಲ್ಲ. ತನ್ನ ಮೇಲಿನ ಆಪಾದನೆ ಸುಳ್ಳಿನಿಂದ ಕೂಡಿರುತ್ತದೆ. ಆಂಜನಪ್ಪನ ಮಕ್ಕಳು ಸಲ್ಲಿಸಿದ ಅರ್ಜಿಗೆ ದೂರುದಾರರು ತಕರಾರು ಸಲ್ಲಿಸಿದ್ದು, ಅದನ್ನು ಎರಡು ತಿಂಗಳ ಹಿಂದೆಯೇ ತಹಶೀಲ್ದಾರ್ ನ್ಯಾಯಾಲಯಕ್ಕೆ ವರ್ಗಾಯಿಸಿದ್ದು, ಲಂಚಕ್ಕೆ ಬೇಡಿಕೆ ಇಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ದೂರುದಾರರು ತನ್ನನ್ನು ಈ ಹಿಂದೆ ಭೇಟಿ ಮಾಡಿರುವುದಿಲ್ಲ. ತಾನು ರೂ. 5,000/- ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುವುದು ಸತ್ಯಕ್ಕೆ ದೂರವಾಗಿರುತ್ತದೆ. ದಿ: 30/01/2019 ರಂದು ತನಗೆ ದೂರುದಾರರು ಫೋನ್ ಮಾಡಿರಬಹುದು. ಆದರೆ, ಆ ಕಾಲಕ್ಕೆ ನಾನು ಲಂಚಕ್ಕೆ ಬೇಡಿಕೆ ಇಟ್ಟಿರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ. ಈ ಮೇಲ್ಕಂಡ ಕಾರಣಗಳಿಂದ ತನ್ನ ಮೇಲೆ ಪ್ರಾರಂಭಿಸಬಹುದಾದ ಇಲಾಖಾ ವಿಚಾರಣೆಯನ್ನು ಕೈ ಬಿಡಬೇಕೆಂದು ವಿನಂತಿಸಿಕೊಂಡಿದ್ದಾರೆ.

4) ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಹಾಗೂ ಸಾಕ್ಷ್ಯಾದಾರಗಳನ್ನು ಪರಾಂಭರಿಸಲಾಗಿ, ಎದುರುದಾರರ ಮೇಲಿನ ಆಪಾದನೆಗಳನ್ನು ನಂಬದಿರಲು ಹಾಗೂ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ಬರೆದುಕೊಂಡ ನಿಲುವುಗಳನ್ನು ಒಪ್ಪಲು ಪ್ರಕರಣದಲ್ಲಿ ಯಾವುದೇ ಆಧಾರಗಳು ಇರುವುದಿಲ್ಲ. ಎದುರುದಾರರು ಮೇಲ್ಕಂಡಂತೆ ದುರ್ನಡತೆ ಎಸಗಿರುವುದು ಮೇಲ್ನೋಟದಲ್ಲಿ ಕಂಡುಬರುತ್ತದೆ.

5) ದೂರಿನಲ್ಲಿ ಮಾಡಿದ ಆಪಾದನೆ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿ ತನಿಖಾ ಕಾಲದಲ್ಲಿ ಸಂಗ್ರಹಿಸಿದ ದಾಖಲೆಗಳನ್ನು ಪರಿಶೀಲಿಸಲಾಗಿ ಎದುರುದಾರರು ಕರ್ತವ್ಯದಲ್ಲಿ ಸಂಪೂರ್ಣ ನೀತಿ, ನಿಷ್ಠೆಯನ್ನು ಪಾಲಿಸದೆ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ ಮೇಲ್ಕಂಡಂತೆ ಭ್ರಷ್ಟಾಚಾರವೆಸಗಿ ಸರ್ಕಾರಿ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಕ.ನಾ.ಸೇ. (ನಡತೆ) ನಿಯಮ, 1966, 3(1) (i) to (iv) ರ ಅನ್ವಯ ಶಿಸ್ತುಕ್ರಮಕ್ಕೆ ಒಳಪಡಲು ಬಾಧ್ಯರಾಗಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವುದು ನ್ಯಾಯತಾ ದೃಷ್ಟಿಯಿಂದ ಅತೀ ಅವಶ್ಯವಿರುತ್ತದೆ.

6) ಆದ್ದರಿಂದ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು 1957, ನಿಯಮ 14(ಎ) ಅನ್ವಯ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿ, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ಅನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ 3 ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ತಿಳಿಸುವುದು.

28/12

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.